## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ, ಶೋರಾಪೂರ

ಸಿ.ಡಬ್ಲ್ಯೂ 7 ಪಿ.ಡಬ್ಲ್ಯೂ.4

ಸಿ.ಸಿ. ನಂ. 60/2020

| | |
|---|---|
| ಹೆಸರು | ಃ ಷಣ್ಮುಖಪ್ಪ |
| ತಂದೆ ಹೆಸರು | ಃ ಸಾಹೇಬಗೌಡ |
| ವಯಸ್ಸು | ಃ 53 ವರ್ಷ |
| ಉದ್ಯೋಗ | ಃ ಎಎಸಐ ಕೊಡೆಕಲ್ ಠಾಣೆ |
| ವಾಸ | ಃ ಕೊಡೆಕಲ್ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ **13-07-2026**

ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ನಾನು 2016 ರಿಂದ 2023 ರವರೆಗೆ ಕೆಂಭಾವಿ ಪೊಲೀಸಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿಃ 21-08-2018 ರಂದು ರಾತ್ರಿ 8.30 ಸಮಾರಿಗೆ ಚಾಸಾಃ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಕೆಂಭಾವಿ ಪೊಲಿಸ ಠಾಣಾ ಕ್ರೈಮ್ ನಂ.227/2018 ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೂಂಡು ಪ್ರ.ವ.ವ. ತಯಾರಿಸಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಸಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದುರಿನಲ್ಲಿರುವ ಸಹಿ ನನ್ನದೆ ಇರುತ್ತದೆ ಸದರಿ ದೂರನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ನೊಡುತ್ತಿರುವ ಪ್ರ.ವ.ವ. ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿ ನಿಪಿ.4(ಎ) ಎಂದು ಗುರುತಿಸಲಾಯಿತು. ದಿನಾಂಕಃ 22-08-2018 ರಂದು ಚಾಸಾಃ 1 ರವರು ಘಟನಾ ಸ್ಥಳಕ್ಕೆ ಹೋಗಿ ಚಾಸಾಃ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಮುಂಜಾನೆ 9.00 ರಿಂದ 10.00 ಗಂಟೆಯವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಪಂಚನಾಮೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ಪಂಚನಾಮೆಯ

ಕಾಲಕ್ಕೆ ಜಪ್ತಿ ಪಡಿಸಿಕೊಂಡಿರುವ ಬಡಿಗೆಯಾಗಿರುತ್ತದೆ. ಸದರಿ ಬಡಿಗೆ ಮು. ಮಾ. 1 ಎಂದು ಗುರುತಿಸಲಾಯಿತು. ಅದೆ ದಿನ ಚಾಸಾಃ 4 ರಿಂದ 6 ರವರ ಹೇಳಿಕೆಯನ್ನು ಪಡೆದಿರುತ್ತೇವೆ. ದಿನಾಂಕಃ 23-09-2018 ರಂದು ವೈದ್ಯಾಧಿಕಾರಿಗಳಿಂದ ಗಾಯದ ಪ್ರಮಾಣ ಪಡೆದು ಪತ್ಯೇಕ ಸೇರಿಸಿಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ವೈದ್ಯಕೀಯ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೆ ಇರುತ್ತದೆ. ಸದರಿ ಪ್ರಮಾಣ ಪತ್ರವನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷದಾರಗಳು ಕಂಡುಬಂದಿರುವುದರಿಂದ ಅದೆ ದಿನ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿಯ ಪರ ಶ್ರೀಮತಿ ಎಸ್ ಎಮ್ ಪಿ ವಕೀಲರಿಂದಃ</u>

ಆ ದಿನ ದೂರು ಕೊಡಲು ಚಾಸಾಃ 1 ರವರು ಬಂದಿದ್ದರು. ಅದೆ ದಿನ 1 ನೇ ಆರೋಪಿ ಮತ್ತು ಆತನ ಹೆಂಡತಿ ಚಾಸಾಃ 1 ರವರ ವಿರುದ್ದ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ದೂರನ್ನು ದಾಖಲಿಸಿದ ನಾನು ಸ್ಥಾನಿಕ ವಿಚಾರಣೆ ಮಾಡಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರು ನೀಡಿದ ಸುಳ್ಳು ದೂರಿನ ಆದಾರದ ಮೇರೆಗೆ ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾದಾರಗಳು ಕಂಡು ಬಂದಿದ್ದರು ಸಹಿತ ಚಾಸಾಃ 1 ರವರ ಮಾತು ಕೇಳಿ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಜಪ್ತಿ ಪಡಿಸಿಕೊಂಡಿರುವಂತಹ ಮು. ಮಾ. ಮೇಲೆ ಪಂಚರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಮಾಡಿಸಿರುತ್ತೇವೆ ಬಹಳ ದಿನಗಳು ಆಗಿರುವುದರಿಂದ ಅಳಿಸಿಹೋಗಿರುತ್ತದೆ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆ ಃ ಇಲ್ಲ.</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪೂರ.